**<u>ದಿನಾಂಕಃ14.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ವಾದಿಗಳ ಪರ ಶ್ರೀ. ಎಂ ಎಂ ವಕೀಲರಿಂದಃ-</u>**

1. ಇದೇ ಚನ್ನಪಟ್ಟಣ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ 269/2018 ಎಂದು ದಾವೆಯನ್ನು ಈ ದಾವೆಯ 1ನೇ ಪ್ರತಿವಾದಿ ವೆಂಕಟರಮಣ ಮತ್ತು 5ನೇ ಪ್ರತಿವಾದಿ ವಿನುತರವರ ವಿರುದ್ದ ಮಾಡಿದ್ದೇನೆ ಎಂದರೆ ಸರಿ. ಸದರಿ ಅಸಲು ದಾವಾ ನಂ.269/2018ರಲ್ಲಿ ಈ ದಾವೆಯ ವಾದಿಯರನ್ನು ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ. ಅಸಲು ದಾವಾ 269/2018ರಲ್ಲಿ ವಿನುತ ಮತ್ತು ವೆಂಕಟರಮಣರವರ ವಿರುದ್ದ ಮಧ್ಯಕಾಲೀನ ಆದೇಶ ಆಗಿರುವುದು ಎಂದರೆ ಸರಿ. ಸದರಿ ದಾವೆಯನ್ನು ಈ ದಾವೆಯ 1ನೇ ಪ್ರತಿವಾದಿ ವೆಂಕಟರಮಣ ಮತ್ತು 5ನೇ ಪ್ರತಿವಾದಿ ವಿನುತರವರ ವಿರುದ್ದ ಶಾಶ್ವತ ನಿರ್ಬಂದಕಾಜ್ಞೆಯನ್ನು ಕೋರಿ ಮಾತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯು ಚಾಲ್ತಿಯಲ್ದೆಯಾ ಎಂದರೆ ಸಾಕ್ಷಿಯು ಅಂತಿಮ ತೀರ್ಪು ಬಂದಿದೆ ಎನ್ನುತ್ತಾರೆ. ಸದರಿ ಅಂತಿಮ ತೀರ್ಪಿನ ಪ್ರತಿಯನ್ನು ನಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಎನ್ನುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ